ಮುಗಿದಿರುವ ದುರ್ಬಲ ಕ್ಷಯರೋಗಿಗಳನ್ನು ತನ್ನ ಬಲಿಷ್ಠವಾದ ಕೈಗಳ ದೃಢವಾದ ಆಧಾರದಿಂದ ಹೊರಗೆ ಕರೆದೊಯ್ದು ಅಲ್ಲಿ ಮಾಡಿಟ್ಟಿರುವ ವಿಶೇಷ ರೀತಿಯ ರೆಸ್ಟಿಂಗ್ ಚೇರ್‌ಗಳಲ್ಲಿ ಕೂಡಿಸಿ ಲಿಫ್ಟ್‌ನ ನೆರವಿನಿಂದ ಕೆಳಕ್ಕೆ ತಲುಪಿಸುವುದು.

ರೋಗಿಗಳು ಬರುತ್ತಾರೆ. ಅವರೋ ಕಳಾಹೀನವಾದ ಮತ್ತು ಹತಾಶ ಕಣ್ಣುಗಳ, ತೆರೆದ ಜರ್ಜರಿತ ಎದೆ ಮತ್ತು ಕೈಯಲ್ಲಿ ಬಟ್ಟೆಗಳನ್ನಿಟ್ಟುಕೊಂಡಿರುವವರು. ಬರುತ್ತಿದ್ದಂತೆಯೇ ಡಾ. ಹಿಲ್ ಪ್ಲೆಕಿಮೀಟರ್ ಮತ್ತು ಒಂದು ಸಣ್ಣ ನಳಿಕೆಯ ಮೂಲಕ ಅವರು ಎದೆ ಮತ್ತು ಬೆನ್ನಿನ ಪರೀಕ್ಷೆ ಮಾಡುತ್ತಾರೆ. ಠಕ್–ಠಕ್, ಕಿಟ್... ಕಿಟ್... "ಉಸಿರು ತೊಗೊಳ್ಳಿ. ಹೂಂ ಇನ್ನು ಸ್ವಲ್ಪ ಜೋರಾಗಿ..."

ಇದಾದ ಎರಡು ಸೆಕೆಂಡ್ ಬಳಿಕ ಔಷಧದ ಚೀಟಿಯನ್ನು ಹೇಳಿ ಬರೆಸುತ್ತಾರೆ. ಒಂದೆರಡು ಸೆಕೆಂಡುಗಳಲ್ಲೇ ಅದನ್ನು ಮುಗಿಸಿ, "ಹೂಂ, ಇದಾದ ಮೇಲೆ ಯಾರ ನಂಬರ್ರೂ?" ಅಂತ ಕೇಳುತ್ತಾರೆ.

ಕಳೆದ ಮೂರು ವರ್ಷಗಳಿಂದ ಇದೇ ಕ್ರಮ ನಡೆದುಕೊಂಡು ಬರುತ್ತಾ ಇದೆ. ಇದೇ ರೀತಿ ಪ್ರತಿದಿನ ಬೆಳಗ್ಗೆ ಒಂಬತ್ತು ಗಂಟೆಯಿಂದ ಮಧ್ಯಾಹ್ನ ಹನ್ನೆರಡು ಗಂಟೆಯವರೆಗೆ ಕ್ಷಯ ರೋಗಿಗಳ ಗುಂಪು ಒಂದೊಂದಾಗಿ ಬರುತ್ತದೆ ಮತ್ತು ತಮ್ಮ ಜೀವನ–ಮರಣದ ಚೀಟಿ ತೆಗೆದುಕೊಂಡು ಹೊರಟುಹೋಗುತ್ತದೆ. ಮತ್ತೆ ಬರುತ್ತದೆ ಮತ್ತೆಮತ್ತೆ ಹೊರಟುಹೋಗುತ್ತದೆ.

ನಿರಂತರವಾಗಿ ಇದೇ ಕ್ರಮದಲ್ಲಿ ಒಂದು ದಿನ ಅಂದರೆ, ಮೇ 20ರಂದು ಒಂಬತ್ತು ಗಂಟೆಗೆ ಸರಿಯಾಗಿ ಎತ್ತರವಾದ, ಅರೆನಗ್ನ, ಮತ್ತು ನೋಡುವುದಕ್ಕೆ ನಡೆದಾಡುವ ಅಸ್ಥಿಪಂಜರ ಮಾತ್ರ ಎಂಬಂತಿದ್ದ ರೋಗಿಯೊಬ್ಬ ಡಾಕ್ಟರರ ಕೊಠಡಿಗೆ ಪ್ರವೇಶಿಸಿದ. ಅವನ ಕಣ್ಣಗೊಂಬೆಗಳು ತಲೆಬುರುಡೆಯಲ್ಲಿ ಮಗ್ನವಾಗಿ ತಮ್ಮ ಅಸ್ತಿತ್ವವನ್ನು ವಿಲೀನಗೊಳಿಸಲಿಚ್ಛಿಸುತ್ತಿವೆಯೋ ಎಂಬಂತೆ ಕಾಣುತ್ತಿದ್ದವು. ಕೆನ್ನೆಗಳು ಕುಗ್ಗಿ ಒಳಕ್ಕೆ ಹೋಗಿಬಿಟ್ಟಿದ್ದವು. ಚರ್ಮದಿಂದ ಆವೃತವಾದ ಅಸ್ಥಿಪಂಜರವೆಂಬಂತಿದ್ದ ತೆರೆದ ಎದೆ. ಮಾಂಸರಹಿತವಾದ ಅವನ ಒಂದು ತೋಳಿನ ಚರ್ಮ ನೀಲಿ ತಿರುಗಿತ್ತು. ಉದ್ದವಾದ ಪಾದಗಳ ಆ ವ್ಯಕ್ತಿ,



ನಡುಗುವ ಹೆಜ್ಜೆಗಳನ್ನಿಡುತ್ತ ಬಂದ. ಕುಂಡಗಳಲ್ಲಿ ಹಾಕಿದ್ದ ಹೂವಿನ ಗಿಡದ ಬಲವಾದ ಕೊಂಬೆಯನ್ನು ಹಿಡಿದುಕೊಂಡು ಎದ್ದು ನಿಂತು ಜೋರು ಜೋರಾಗಿ ಕೆಮ್ಮತೊಡಗಿದ. ಕೆಮ್ಮುತ್ತಿದ್ದಂತೆ ಅವನ ಎದೆ ಮೇಲೆ ಕೆಳಗೆ ಹೋಗುತ್ತಿತ್ತು. ಅವನು ಈಗಲೋ ಆಗಲೋ ಸಾಯುತ್ತಾನೇನೋ ಎನ್ನುವಂತಿದ್ದ.

ಕೆಮ್ಮು ಒಂದು ಕ್ಷಣ ನಿಲ್ಲುತ್ತಿದ್ದಂತೆ ಆಳು ಅವನನ್ನು ವೈದ್ಯರ ಬಳಿಗೆ ಕರೆತಂದು ಕೂಡಿಸಿದ.

ನಿಯಮಾನುಸಾರ ಸಂಕ್ಷೇಪದಲ್ಲಿ ಪರೀಕ್ಷಿಸಿ ವೈದ್ಯರು ನಿರಾಶೆ ತುಂಬಿದ ದನಿಯಲ್ಲಿ, "ಇಲ್ಲ... ಇಲ್ಲ... ಇಲ್ಲ! ಏನೂ ಭರವಸೆ ಇಲ್ಲ. ಎಡಗಡೆ ಶ್ವಾಸಕೋಶ ಪೂರ್ತಿ ನಿಷ್ಪ್ರಯೋಜಕವಾಗಿಬಿಟ್ಟಿದೆ... ಇನ್ನು ಬಲಗಡೆ